# ಮಾಹಿತಿ ಹಕ್ಕು ಕಾಯ್ದೆ 2005 ರ ಕಲಂ 4(1)(ಬಿ) ರ ಅಡಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮಾಹಿತಿಗಳು.

## 2016-17

| | | |
|---|---|---|
| 01 | ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಿರ್ದಿಷ್ಟ ವ್ಯವಸ್ಥೆ ಮತ್ತು ಕರ್ತವ್ಯ | **1. ಪ್ರಾಧಿಕಾರದ ಸಂಘಟನೆ, ಪ್ರಕಾರ್ಯಗಳು ಮತ್ತು ಕರ್ತವ್ಯಗಳು:**<br>ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1985 ರಡಿಯಲ್ಲಿ ರಚಿಸಲಾಗಿದೆ. ಬೆಂಗಳೂರು ಮಹಾನಗರ ಪ್ರದೇಶಕ್ಕೆ ರಚನಾ ನಕ್ಷೆಯನ್ನು ತಯಾರಿಸಲು ಹಾಗೂ ಯೋಜಿತ ಬೆಳವಣಿಗೆಯನ್ನು ಸಾಧಿಸುವ ಉದ್ದೇಶದಿಂದ ರಚಿತವಾಗಿರುವ ಈ ಪ್ರಾಧಿಕಾರವು ಕೆಳಕಂಡ ಕಾರ್ಯಕ್ರಮಗಳನ್ನು ಹೊಂದಿರುತ್ತದೆ.<br>i) ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಪ್ರದೇಶದ ಸಮೀಕ್ಷೆ ನಡೆಸಿ ವರದಿಗಳನ್ನು ತಯಾರಿಸುವುದು.<br>ii) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ರಚನಾ ನಕ್ಷೆಯನ್ನು ತಯಾರಿಸುವುದು.<br>iii) ರಚನಾ ನಕ್ಷೆಯಲ್ಲಿನ ಪ್ರಸ್ತಾವನೆಗಳಿಗೆ ಪೂರಕವಾದ ಎಲ್ಲಾ ಕೆಲಸಗಳನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳುವುದು.<br>iv) ಪ್ರಾಧಿಕಾರದ ಪ್ರದೇಶದಲ್ಲಿ ರಚನಾ ನಕ್ಷೆಯನ್ನು ಜಾರಿಗೊಳಿಸುವ ಸಂಬಂಧ ಯೋಜನೆಗಳನ್ನು ತಯಾರಿಸುವುದು.<br>v) ಬೆಂಗಳೂರು ಮಹಾನಗರ ಪ್ರದೇಶದಲ್ಲಿನ ನಗರ ಪಟ್ಟಣಗಳ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಸಂಬಂಧಿಸಿದ ಪ್ರಾಧಿಕಾರಗಳೊಂದಿಗೆ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು.<br>vi) ಪ್ರಾಧಿಕಾರದ ಯೋಜನೆಗಳಿಗೆ ಅಗತ್ಯವಾಗಿ ಬೇಕಾದ ಹಣಕಾಸನ್ನು ಸಂಗ್ರಹಿಸುವುದು ಹಾಗೂ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಸ್ಥಳೀಯ ಪ್ರಾಧಿಕಾರಗಳಿಗೆ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಸಹಕರಿಸುವುದು.<br>vii) ಸರ್ಕಾರದಿಂದ ವಹಿಸಲ್ಪಡುವ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಅಥವಾ ಯಾವ ಉದ್ದೇಶಕ್ಕೆ ಪ್ರಾಧಿಕಾರವು ರಚಿಸಲ್ಪಟ್ಟಿದೆಯೋ ಆ ಉದ್ದೇಶಗಳನ್ನು ಈಡೇರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.<br>viii) ಯಾವುದೇ ಅಭಿವೃದ್ಧಿ ಯೋಜನೆ ಅಥವಾ ನಗರ ಯೋಜನೆಯ ರೂಪುರೇಖೆಗಳನ್ನು ಕಾರ್ಯರೂಪಗೊಳಿಸಲು ಸ್ಥಳೀಯ ಪ್ರಾಧಿಕಾರಗಳಿಗೆ ವಹಿಸುವುದು.<br>ix) ಇದಲ್ಲದೆ ಪ್ರಾಧಿಕಾರದ ಪ್ರದೇಶಾಭಿವೃದ್ಧಿಗೆ ಸಂಬಂಧಿಸಿದಂತೆ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಮಹಾನಗರ ರಸ್ತೆ ಸಾರಿಗೆ ಸಂಸ್ಥೆ ಮತ್ತು ಇತರೆ ಸಂಸ್ಥೆಗಳ ಚಟುವಟಿಕೆಗಳಿಗೆ ಸಮನ್ವಯ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುವುದು. |
| 02 | ಬಿ.ಎಂ.ಆರ್.ಡಿ.ಎ. ಅಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯ | **1. ಮಹಾನಗರ ಆಯುಕ್ತರು:**<br>ಮಹಾನಗರ ಆಯುಕ್ತರು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯನಿರ್ವಹಣಾಧಿಕಾರಿಯಾಗಿರುತ್ತಾರೆ.<br>**2. ಮಹಾನಗರ ಯೋಜಕರು:**<br>ಮಹಾನಗರ ಯೋಜಕರು ಮಹಾನಗರ ಆಯುಕ್ತರು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಗರ ಯೋಜನೆಗಳ ಮೇಲ್ವಿಚಾರಣೆ ಹಾಗೂ ಮಹಾನಗರ ಆಯುಕ್ತರಿಗೆ ಎಲ್ಲಾ ವಿಷಯ/ಯೋಜನೆಗಳಿಗೆ ಸಹಕರಿಸುವುದು.<br>**3. ಹೆಚ್ಚುವರಿ ಮಹಾನಗರ ಆಯುಕ್ತರು:** |

| | | |
|---|---|---|
| | | ಮಹಾನಗರ ಯೋಜಕರು ಮಹಾನಗರ ಆಯುಕ್ತರು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಆಡಳಿತ, ಕಂದಾಯ & ಲೆಕ್ಕ ವಿಭಾಗದ ಮೇಲ್ವಿಚಾರಣೆ ಹಾಗೂ ಮಹಾನಗರ ಆಯುಕ್ತರಿಗೆ ಎಲ್ಲಾ ವಿಷಯಗಳಲ್ಲಿ ಸಹಕರಿಸುವುದು.<br>ಈ ಕೆಳಕಂಡ ಅಧಿಕಾರಿ/ಸಿಬ್ಬಂದಿ ವರ್ಗದವರು ನಗರ ಮತ್ತು ಗ್ರಾಮಾಂತರ ಯೋಜನಾ ಶಾಖೆ, ಆಡಳಿತ ಶಾಖೆ, ಕಂದಾಯ ಶಾಖೆ & ಲೆಕ್ಕಶಾಖೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುತ್ತಾರೆ.<br>**ನಗರ ಮತ್ತು ಗ್ರಾಮಾಂತರ ಯೋಜನಾ ಶಾಖೆ:**<br>1. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು:<br>2. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು:<br>3. ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು–1&2:<br>4. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು–1,2&3:<br>5. ನಗರ ಯೋಜಕರು–1, 2, 3 & 4:<br><br>**ಆಡಳಿತ ಶಾಖೆ:**<br>1. ಉಪ ಮಹಾನಗರ ಆಯುಕ್ತರು:<br>2. ಸಹಾಯಕ ಮಹಾನಗರ ಆಯುಕ್ತರು:<br>3. ತಹಶೀಲ್ದಾರ್:<br>4. ದ್ವಿತೀಯ ದರ್ಜೆ ಸಹಾಯಕರು:<br><br>**ಲೆಕ್ಕ ಶಾಖೆ:**<br>1. ಲೆಕ್ಕಾಧಿಕಾರಿಗಳು:<br>2. ಲೆಕ್ಕಾಧೀಕ್ಷಕರು:<br>3. ಪ್ರಥಮ ದರ್ಜೆ ಸಹಾಯಕರು: |
| 3 | ತೀರ್ಮಾನಗಳನ್ನು ಕೈಗೊಳ್ಳುವಾಗ ಅನುಸರಿಸಲಾಗುತ್ತಿರುವ ವಿಧಾನ, ಮೇಲ್ವಿಚಾರಣೆ ಹಾಗೂ ಹೊಣೆಗಾರಿಕೆಯ ವಿವರಗಳು. | **3(ಅ) ಮಹಾಯೋಜನೆ ತಯಾರಿಸುವುದು:**<br>1. ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸುವುದು ಹಾಗೂ ಮಹಾಯೋಜನೆಯನ್ನು ತಯಾರಿಸುವುದು.<br>2. ಕೆಲಸಗಳನ್ನು ನಿರ್ವಹಿಸಲು ಖಾಸಗಿ ಸಂಸ್ಥೆಗಳಿಂದ ಟೆಂಡರ್ ಕರೆಯುವುದು, ಕಾರ್ಯಾದೇಶ ಹಾಗೂ ಪ್ರಗತಿಯನ್ನು ನಿರ್ದೇಶಿಸುವುದು.<br>3. ವಲಯ ನಿಯಮಾವಳಿಗಳು ಮತ್ತು ನಕ್ಷೆಗಳನ್ನು ಅನುಮೋದನೆಗೆ ಸರ್ಕಾರಕ್ಕೆ ಸಲ್ಲಿಸುವುದು.<br>4. ತಾತ್ಕಾಲಿಕ ಅನುಮೋದನೆ ಪಡೆದ ನಂತರ ಮಹಾಯೋಜನೆಯನ್ನು ಪ್ರಕಟಿಸುವುದು ಮತ್ತು ನಿಗಧಿತ ಸಮಯದಲ್ಲಿ ಸಾರ್ವಜನಿಕರಿಂದ ಸಲಹೆ ಸೂಚನೆಗಳನ್ನು ಪಡೆಯುವುದು.<br>5. ಮಹಾಯೋಜನೆಯ ಬಗ್ಗೆ ಬಂದ ಸಲಹೆ ಸೂಚನೆಗಳನ್ನು ಪರಿಶೀಲಿಸುವುದು ಮತ್ತು ಕ್ರಮಬದ್ಧವಾಗಿರುವ ಸಲಹೆ ಸೂಚನೆಗಳನ್ನು ಮಹಾಯೋಜನೆಯಲ್ಲಿ ಅಳವಡಿಸುವುದು.<br>6. ಅಂತಿಮ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುವುದು ಅನುಮೋದನೆ ನಂತರ ನಕ್ಷೆಗಳನ್ನು ಮತ್ತು ವಲಯ ನಿಯಮಾವಳಿಗಳ ಪ್ರಕಾರ ಕಾರ್ಯ ನಿರ್ವಹಿಸುವುದು.<br>7. ಮಹಾಯೋಜನೆ ಮತ್ತು ವಲಯ ನಿಯಮಾವಳಿಗಳ ಅನುಮೋದನೆ ನಂತರ ಅವುಗಳ ಪ್ರತಿಗಳ ನಕ್ಷೆ ಅಥವಾ ಸಿ.ಡಿ. ರೂಪದಲ್ಲಿ ಸಾರ್ವಜನಿಕರಿಗೆ ಕೋರಿಕೆ ಮೇರೆಗೆ ಒದಗಿಸುವುದು. |
| 04 | ಬಿ.ಎಂ.ಆರ್.ಡಿ.ಎ. ಗೆ ಸಂಬಂಧಿಸಿದ ಕರ್ತವ್ಯ ನಿರ್ವಹಿಸಲು ನಿಗಧಿಪಡಿಸಿರುವ ಅದರ ಮಾದರಿ ಸೂತ್ರ. | 1. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾಯ್ದೆ–1985.<br>2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ–1961.<br>3. ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು–1965.<br>4. ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಸುತ್ತೋಲೆ/ಅಧಿಸೂಚನೆ/ಆದೇಶ/ ಮಾರ್ಗದರ್ಶನಗಳು. |
| 05 | ಬಿ.ಎಂ.ಆರ್.ಡಿ.ಎ. ಯ ಕಾರ್ಯಗಳನ್ನು ನಿರ್ವಹಿಸಲು ಅದು ಹೊಂದಿರುವ ಕಾಯ್ದೆ, ನಿಬಂಧನೆಗಳು, ಸೂಚನೆಗಳು, | 1) ಬಿ.ಎಂ.ಆರ್.ಡಿ.ಎ. ಕಾಯ್ದೆ 1985 ಹಾಗೂ ಪ್ರಾಧಿಕಾರದ ಸೂಚನೆಯಂತೆ ರಚನಾ ನಕ್ಷೆಯನ್ನು ತಯಾರಿಸುವುದು.<br>2) ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಸುತ್ತೋಲೆ/ಅಧಿಸೂಚನೆ/ಆದೇಶ/ ಮಾರ್ಗದರ್ಶನಗಳು. |

| | | |
|---|---|---|
| | ಕೈಪಿಡಿ ಮತ್ತು ದಾಖಲೆಗಳು ಅಥವಾ ಅದರ ನೌಕರರು ಪ್ರಾಧಿಕಾರದ ಕೆಲಸಗಳನ್ನು ನಿರ್ವಹಿಸಲು ಪ್ರಯೋಗಿಸುತ್ತಿರುವ ನಿಯಮಗಳು. | |
| 06 | ಬಿ.ಎಂ.ಆರ್.ಡಿ.ಎ. ಯಲ್ಲಿ ನಿರ್ವಹಿಸಲಾಗಿರುವ ದಾಖಲಾತಿಗಳ ವಿವರ. | 1) ಭೂ ಪರಿವರ್ತನೆ & ಭೂ ಉಪಯೋಗ ಪ್ರಕರಣಗಳು<br>2) ನಗದು ಪುಸ್ತಕ.<br>3) ರಸೀದಿ ಪುಸ್ತಕ.<br>4) ಜಮೆ ವಿವರಗಳ ವಹಿ.<br>5) ಸಾದಿಲ್ವಾರು ವೆಚ್ಚದ ವಿವರಗಳ ವಹಿ.<br>6) ನಡವಳಿಕೆಯ ಪುಸ್ತಕ. |
| 07 | ಬಿ.ಎಂ.ಆರ್.ಡಿ.ಎ. ಯ ನೀತಿಗಳನ್ನು ರೂಪಿಸಲು ಮತ್ತು ಅವುಗಳನ್ನು ಕಾರ್ಯಗತಗೊಳಿಸಲು ಸಾರ್ವಜನಿಕರೊಂದಿಗೆ ಸಮಾಲೋಚನೆ ಅಥವಾ ಅವರ ಪ್ರಾತಿನಿಧ್ಯ ಪಡೆಯಲು ಮಾಡಿಕೊಂಡಿರುವ ವ್ಯವಸ್ಥೆಯ ವಿವರಗಳು. | ಇರುವುದಿಲ್ಲ. |
| 08 | ಪ್ರಾಧಿಕಾರಕ್ಕೆ ಅಗತ್ಯವಾದ ಸಲಹೆ ಸೂಚನೆಗಳನ್ನು ನೀಡುವ ಸಲುವಾಗಿ ಇರುವ ಸಮಿತಿಗಳು, ಪರಿಷತ್ತುಗಳು ಅಥವಾ ಯಾವುದೇ ಸಂಸ್ಥೆಗಳ ವಿವರ ಹಾಗೂ ಇವುಗಳ ನಡವಳಿಗಳಲ್ಲಿ ಸಾರ್ವಜನಿಕರು ಭಾಗವಹಿಸಲು ಅವಕಾಶವಿದೆಯೇ ಮತ್ತು ಇವುಗಳ ನಡವಳಿಕೆಗಳು ಸಾರ್ವಜನಿಕರಿಗೆ ಲಭ್ಯ ಇರುವುದೇ | ಪ್ರಾಧಿಕಾರಕ್ಕೆ ಸಮಿತಿಗಳನ್ನು ರಚಿಸಿ ಅವುಗಳಿಗೆ ಕಾರ್ಯವಿಧಾನ ಹಾಗೂ ನಿರ್ವಹಿಸಬೇಕಾದ ಅವಧಿಯನ್ನು ನಿರ್ಧಿಷ್ಟಪಡಿಸಿ, ಸದರಿ ಸಮಿತಿಗಳಿಗೆ ಯಾವುದಾದರೂ ವಿಷಯದ ಬಗ್ಗೆ ವಿಚಾರಣೆ ಮಾಡಿ ವರದಿ ನೀಡುವಂತೆ ಸೂಚಿಸಲು ಅವಕಾಶವಿರುತ್ತದೆ. |
| 09 | ಅಧಿಕಾರಿಗಳ ಮತ್ತು ನೌಕರರ ದೂರವಾಣಿ ವಿವರ. | (see table below) |
| 10 | ಬಿ.ಎಂ.ಆರ್.ಡಿ.ಎ.ಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರು ಮಾಸಿಕ ಪಡೆಯುವ ಸಂಬಳ/ಪ್ರತಿಫಲದ ವಿವರ. | ಅನುಬಂಧ-1 ರಲ್ಲಿ ಪಟ್ಟಿ ಲಗತ್ತಿಸಿದೆ. |
| 11 | ಯೋಜನೆಯಲ್ಲಿ ಪ್ರತಿಯೊಂದು ಕಾರ್ಯಕ್ಕೂ ಆಯವ್ಯಯದಲ್ಲಿ ಹಂಚಿರುವ ಮೊಬಲಗು, ಇದಕ್ಕೆ ತಗಲಿದ ವೆಚ್ಚ ಹಾಗೂ ವಿತರಣೆ ಮಾಡಿದ ಮೊಬಲಗಿನ ವಿವರ. | 2016-17ನೇ ಸಾಲಿನ ಆಯವ್ಯಯದಲ್ಲಿ ಬಿಎಂಆರ್‌ಡಿಎ ಯೋಜನೆಗಳಿಗೆ ಸರ್ಕಾರದಿಂದ ಯಾವುದೇ ಅನುದಾನವನ್ನು ಹಂಚಿಕೆ ಮಾಡಿರುವುದಿಲ್ಲ. ಈ ಕೆಳಕಂಡ ಯೋಜನೆಗಳಿಗೆ ಪ್ರಾಧಿಕಾರದ ನಿಧಿಯಿಂದಲೇ ವೆಚ್ಚವನ್ನು ಭರಿಸಲಾಗಿರುತ್ತದೆ. |

Item 09 – ಅಧಿಕಾರಿಗಳ ಮತ್ತು ನೌಕರರ ದೂರವಾಣಿ ವಿವರ:

| ಕ್ರ.ಸಂ. | ಅಧಿಕಾರಿಗಳ ಪದನಾಮ | ದೂರವಾಣಿ ಸಂಖ್ಯೆ |
|---|---|---|
| 1. | ಮಹಾನಗರ ಆಯುಕ್ತರು | 22255493,<br>22340981 (ಫ್ಯಾಕ್ಸ್) |
| 2. | ಮಹಾನಗರ ಯೋಜಕರು | 22263479 |
| 3. | ಅಪರ ಮಹಾನಗರ ಆಯುಕ್ತರು | 22263479 |
| 4. | ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು | 22340982 |
| 5. | ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು | 22263479 |
| 6. | ಉಪ ಮಹಾನಗರ ಆಯುಕ್ತರು | 22340983 |
| 7. | ಸಹಾಯಕ ಮಹಾನಗರ ಆಯುಕ್ತರು | 22205284 |
| 8. | Reception | 22263479 |

<table>
<tr><td></td><td></td><td>

**<u>2016-17ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ವಿವಿಧ ಯೋಜನೆಗಳಿಗೆ ವೆಚ್ಚ ಮಾಡಿದ ವಿವರ:</u>**

(ರೂ.ಗಳಲ್ಲಿ)

<table>
<tr><th>ಕ್ರ.ಸಂ</th><th>ಯೋಜನೆಯ ಹೆಸರು</th><th>ವೆಚ್ಚ</th></tr>
<tr><td>1</td><td>ಯೋಜನಾ ವೆಚ್ಚ</td><td>1,69,61,533-00</td></tr>
<tr><td>2</td><td>ಇತರೆ<br>ಮುಖ್ಯಮಂತ್ರಿಗಳ ಪರಿಹಾರ ನಿಧಿ</td><td>3,00,00,000-00</td></tr>
<tr><td>3</td><td>ಆಡಳಿತ ವೆಚ್ಚಗಳು ಮತ್ತು ಇತರೆ ವೆಚ್ಚಗಳು</td><td>3,06,43,032-00</td></tr>
<tr><td></td><td>ಒಟ್ಟು</td><td>7,76,04,565-00</td></tr>
</table>

ಈ ಪ್ರಾಧಿಕಾರದ 2016-17 ನೇ ಸಾಲಿನ ಮಾಸಿಕ ವೆಚ್ಚ ಮತ್ತು ಸ್ವೀಕೃತಿ ವಿವರದ ಪಟ್ಟಿಯನ್ನು ಅನುಬಂಧ-2 ಮತ್ತು 3 ರಲ್ಲಿ ಲಗತ್ತಿಸಿದೆ.
</td></tr>
<tr><td>12</td><td>ಸಹಾಯಧನ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವ ರೀತಿ ಮತ್ತು ಇದಕ್ಕೆ ನಿಗಧಿಪಡಿಸಿಕೊಂಡಿರುವ ಮೊಬಲಗು, ಹಾಗೂ ಯೋಜನೆಗಳಿಗೆ ಆಯ್ಕೆ ಮಾಡಿಕೊಂಡಿರುವ ಫಲಾನುಭವಿಗಳ ವಿವರ.</td><td>ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಲ್ಲಿ ಪ್ರಸ್ತುತ ಯಾವುದೇ ಸಹಾಯಧನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಇರುವುದಿಲ್ಲ.</td></tr>
<tr><td>13</td><td>ಬಿ.ಎಂ.ಆರ್.ಡಿ.ಎ. ಯಿಂದ ಮಂಜೂರಾದ ರಿಯಾಯಿತಿ, ಅಪ್ಪಣೆ ಪತ್ರ ಅಥವಾ ಅಧಿಕಾರ ಪತ್ರದ ವಿವರ.</td><td>ಈ ಪ್ರಾಧಿಕಾರದಿಂದ ಮಂಜೂರಾದ ಪ್ರಕರಣಗಳ ವಿವರಗಳನ್ನು <u>www.bmrda.karnataka.gov.in</u> ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.</td></tr>
<tr><td>14</td><td>ಪ್ರಾಧಿಕಾರದ ವಿವರಗಳನ್ನು ಒಳಗೊಂಡ ಮಾಹಿತಿಯನ್ನು ಎಲೆಕ್ಟ್ರಾನಿಕ್ ರೂಪ ಮಾಧ್ಯಮದ ಮೂಲಕ ಪೂರ್ಣ ಮಾಹಿತಿ ದೊರೆಯುವ ಮೂಲ</td><td>ಪ್ರಾಧಿಕಾರದ ವಿವರಗಳನ್ನು <u>www.bmrda.karnataka.gov.in</u> ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.</td></tr>
<tr><td>15</td><td>ಸಾರ್ವಜನಿಕ ಉಪಯೋಗಕ್ಕೆ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಪಡೆಯುವ ವಿಧಾನ ಮತ್ತು ಪುಸ್ತಕ ಭಂಡಾರ, ವಾಚನಾಲಯ ಇದ್ದರೆ ಅದನ್ನು ಸಾರ್ವಜನಿಕರಿಗೆ ಯಾವ ಮೂಲದಿಂದ ದೊರಕಿಸಲು ಕ್ರಮ ಕೈಗೊಂಡಿದೆ.</td><td>ಕಛೇರಿ ಪ್ರಕಟಣಾ ಫಲಕ, ವೆಬ್‌ಸೈಟ್‌ನಲ್ಲಿ ಲಭ್ಯವಾಗುವ ವಿವರಗಳಲ್ಲದೆ ಹೆಚ್ಚಿನ ಮಾಹಿತಿ ಅಗತ್ಯತೆ ಇದ್ದಲ್ಲಿ ಪ್ರಾಧಿಕಾರದ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.</td></tr>
<tr><td>16</td><td>ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಮತ್ತು ಹುದ್ದೆಯ ವಿವರ</td><td>

**A) ಆಡಳಿತ ಮತ್ತು ಕಂದಾಯ ಶಾಖೆಗಳ ವಿಚಾರಗಳಿಗೆ:**

1) ಶ್ರೀ.ಜಿ.ಎಂ. ಗಂಗಾಧರ ಸ್ವಾಮಿ ಕೆ.ಎ.ಎಸ್ (ಹಿರಿಯ ಶ್ರೇಣಿ)<br>ಉಪ ಮಹಾನಗರ ಆಯುಕ್ತರು<br>ಹಾಗೂ ಮಾಹಿತಿ ಮೇಲ್ಮನವಿ ಪ್ರಾಧಿಕಾರ [Appeals]<br>ದೂರವಾಣಿ ಸಂಖ್ಯೆ: 22340983.

2) ಡಾ:ಕೆ ದಾಕ್ಷಾಯಿಣಿ, ಕೆ.ಎ.ಎಸ್.,<br>ಸಹಾಯಕ ಮಹಾನಗರ ಆಯುಕ್ತರು<br>ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ [PIO],<br>ದೂರವಾಣಿ ಸಂಖ್ಯೆ: 22263479.

3) ಶ್ರೀ.ಡಿ. ಪಾಂಡುರಂಗ<br>ತಹಶೀಲ್ದಾರ್ ಹಾಗೂ
</td></tr>
</table>

| | | |
|---|---|---|
| | | ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ [APIO],<br>ದೂರವಾಣಿ ಸಂಖ್ಯೆ: 22263479.<br><br>**B) ನಗರ ಮತ್ತು ಗ್ರಾಮಾಂತರ ಯೋಜನಾ ಶಾಖೆಯ ವಿಚಾರಗಳಿಗೆ:**<br>1) ಶ್ರೀ ಎನ್.ಕೆ. ತಿಪ್ಪೇಸ್ವಾಮಿ<br>ಹೆಚ್ಚುವರಿ ನಿರ್ದೇಶಕರು<br>ಹಾಗೂ ಮಾಹಿತಿ ಮೇಲ್ಮನವಿ ಪ್ರಾಧಿಕಾರ [Appeals]<br>ದೂರವಾಣಿ ಸಂಖ್ಯೆ: 22640982.<br>2) ಶ್ರೀ. ತಿಮ್ಮೇಗೌಡ.<br>ಉಪ ನಿರ್ದೇಶಕರು<br>ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ [PIO],<br>ದೂರವಾಣಿ ಸಂಖ್ಯೆ: 22263479.<br><br>**C) ಲೆಕ್ಕ ಶಾಖೆಯ ವಿಚಾರಗಳಿಗೆ:**<br><br>1. ಶ್ರೀ.ಜಿ.ಎಂ. ಗಂಗಾಧರ ಸ್ವಾಮಿ ಕೆ.ಎ.ಎಸ್ (ಹಿರಿಯ ಶ್ರೇಣಿ)<br>ಉಪ ಮಹಾನಗರ ಆಯುಕ್ತರು<br>ಹಾಗೂ ಮಾಹಿತಿ ಮೇಲ್ಮನವಿ ಪ್ರಾಧಿಕಾರ [Appeals]<br>ದೂರವಾಣಿ ಸಂಖ್ಯೆ: 22340983.<br><br>2. ಶ್ರೀಮತಿ ಹೆಚ್.ಪಿ. ಮಂಜುಳ<br>ಲೆಕ್ಕಾಧಿಕಾರಿಗಳು<br>ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ [PIO],<br>ದೂರವಾಣಿ ಸಂಖ್ಯೆ: 22263479.<br>3. ಶ್ರೀಮತಿ ಎಲ್.ಎನ್. ರಾಧಮ್ಮ<br>ಲೆಕ್ಕಾಧೀಕ್ಷಕರು<br>ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ [APIO],<br>ದೂರವಾಣಿ ಸಂಖ್ಯೆ: 22263479.<br><br>ಈ ಪ್ರಾಧಿಕಾರದ ಅಪರ ಮಹಾನಗರ ಆಯುಕ್ತರವರನ್ನು ಮಾಹಿತಿಹಕ್ಕು ಕಾಯ್ದೆಯ ವಿಚಾರಗಳಿಗೆ ಈ ಪ್ರಾಧಿಕಾರದ ನೋಡೆಲ್ ಅಧಿಕಾರಿ ಎಂದು ನಾಮ ನಿರ್ದೇಶನವನ್ನು ಮಾಡಲಾಗಿದೆ. |
| 17 | ಇನ್ನು ಇತರೆ ಮಾಹಿತಿ ಅಳವಡಿಸಿರುವುದು. | ಇರುವುದಿಲ್ಲ. |

**ಮಹಾನಗರ ಆಯುಕ್ತರು,**
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ
ಪ್ರಾಧಿಕಾರ, ಬೆಂಗಳೂರು.